ಮುನ್ನಡೆಯಿಂದ....

# ಸೂಜಿ-ದಾರ

ಗಾರ್ಮೆಂಟ್ಸ್ ಕಾರ್ಮಿಕರ ಸಂಗಾತಿ....

ಸಂಪುಟ : 1 | ಸಂಚಿಕೆ : 5 | ಪುಟ : 8 | ಖಾಸಗಿ ಪ್ರಸಾರಕ್ಕಾಗಿ | ಜೂನ್ 2006

ಸಂವೇದನೆ...

## ಮತ್ತೆ ಯಶಸ್ಸಿನ ಹಾದಿಯಲ್ಲಿ ಕಾರ್ಮಿಕ ಹೋರಾಟಗಳು

ಸ್ನೇಹಿತರೇ,

ಮೇ ದಿನಾಚರಣೆಯನ್ನು ಯಶಸ್ವಿಗೊಳಿಸಿದ ನಿಮ್ಮನ್ನು ಅಭಿನಂದಿಸುತ್ತಾ, ಸೂಜಿದಾರ ಪತ್ರಿಕೆಯು ಐದನೇ ಸಂಚಿಕೆಯನ್ನು ನಿಮ್ಮ ಕೈಗಿಡಲು ಸಂತೋಷಿಸುತ್ತಿದ್ದೇವೆ.

ಬಂಡವಾಳ ಶಾಹಿಗಳ ಹಿಡಿತಕ್ಕೆ ಸಿಕ್ಕಿ ವಿಶ್ವದಾದ್ಯಂತ ಕಾರ್ಮಿಕ ಚಳವಳಿಗಳು ಕ್ಷೀಣಿಸುತ್ತಿವೆ ಎಂಬ ಅಭಿಪ್ರಾಯ ಹೆಚ್ಚಾಗಿ ಕೇಳಿ ಬರುತ್ತಿದ್ದರೂ ಕಾರ್ಮಿಕರ ಹೋರಾಟಗಳು ಯಶಸ್ವಿಯಾಗುತ್ತಲೇ ಇವೆ ಎಂಬುದಕ್ಕೆ ಹಲವಾರು ಉದಾಹರಣೆಯನ್ನು ಕೊಡಬಹುದಾಗಿದೆ.

ಇತ್ತೀಚೆಗೆ ಫ್ರೆಂಚ್ ಸರ್ಕಾರವು ಬಹುರಾಷ್ಟ್ರೀಯ ಕಂಪನಿಗಳು ಒತ್ತಡಕ್ಕೆ ಮಣಿದು 26 ವರ್ಷಕ್ಕಿಂತ ಕಡಿಮೆ ವಯಸ್ಸಿನ ಯುವಕರನ್ನು ಕೆಲಸಕ್ಕೆ ನೇಮಿಸಿಕೊಳ್ಳುವಾಗ ಅವರನ್ನು ತಮಗಿಷ್ಟ ಬಂದಾಗ ಕೆಲಸದಿಂದ ತೆಗೆಯಬಹುದು (ತರಬೇತಿಯ ಅವಧಿಯೆಂದು ಪರಿಗಣಿಸಿ) ಎಂಬ ಕಾನೂನು ಜಾರಿಗೆ ತಂದಾಗ, ಅಲ್ಲಿನ ಕಾರ್ಮಿಕ ಸಂಘಗಳು ಮತ್ತು ಯುವಕರು ಎಚ್ಚೆತ್ತು, ಒಂದುಗೂಡಿ ಸರ್ಕಾರದ ವಿರುದ್ಧ ಬೃಹತ್ ಹೋರಾಟವನ್ನು ಸಂಘಟಿಸಿದರು. ಈ ಹೋರಾಟವು ಫ್ರೆಂಚ್ ದೇಶಾದ್ಯಂತ ಹರಡಿ ಜನಜೀವನವನೇ ಅಸ್ತವ್ಯಸ್ತಗೊಳಿಸಿತು. ಕಾರ್ಮಿಕರ ಹೋರಾಟಕ್ಕೆ ಮಣಿದ ಸರ್ಕಾರ ತಾನು ಜಾರಿಗೆ ತಂದಿದ್ದ ಕಾನೂನು ತಿದ್ದುಪಡಿಯನ್ನು ಹಿಂಪಡೆಯಿತು. ಇಂದಿಗೂ ಯುರೋಪ್ ದೇಶಗಳಲ್ಲಿ ಕಾರ್ಮಿಕ ಸಂಘಟನೆಗಳು ತಮ್ಮ ಶಕ್ತಿಯನ್ನು ಉಳಿಸಿಕೊಂಡಿವೆ.


ಕಾರ್ಮಿಕರ ಈ ಜಯವು, ವಿಶ್ವದ ಕಾರ್ಮಿಕರು ತಮ್ಮ ಹಕ್ಕುಗಳನ್ನು ಪಡೆಯಲು ಸ್ಫೂರ್ತಿಯಾಗಿದೆ.

* * * *

ಕಳೆದೆರಡು ತಿಂಗಳ ಹಿಂದೆ ಸ್ಟೇಟ್‌ಬ್ಯಾಂಕ್ ಆಫ್ ಇಂಡಿಯಾದ ನೌಕರರು ತಮ್ಮ ಪಿಂಚಣಿ ಹೆಚ್ಚಳಕ್ಕಾಗಿ ಹಲವಾರು ಬಾರಿ ಸರ್ಕಾರಕ್ಕೆ ಮನವಿ ಸಲ್ಲಿಸಿದರೂ ಸರ್ಕಾರ ಕಿವಿಗೊಡದೇ ಇದ್ದುದರಿಂದ ಅನಿವಾರ್ಯವಾಗಿ ದೇಶಾದ್ಯಂತ ಮುಷ್ಕರವನ್ನು ಕೈಗೊಂಡ ಕಾರಣಕ್ಕಾಗಿ ಬ್ಯಾಂಕಿನ ಕೆಲಸ ಕಾರ್ಯಗಳು ಅಸ್ತವ್ಯವಸ್ತಗೊಂಡು ಸಾರ್ವಜನಿಕರಿಗೂ ತೊಂದರೆಗಳಾದವು. ಇತರೆ ಬ್ಯಾಂಕುಗಳ ನೌಕರರೂ ಸಹ ಈ ಮುಷ್ಕರಕ್ಕೆ ಬೆಂಬಲ ಸೂಚಿಸಿದುದರಿಂದ ಸರ್ಕಾರದ ಪರ್ಯಾಯ ವ್ಯವಸ್ಥೆಯ ಯತ್ನ ಸಫಲವಾಗಲಿಲ್ಲ. ಕೊನೆಗೂ ಸರ್ಕಾರ ನೌಕರರ ಮುಷ್ಕರಕ್ಕೆ ಮಣಿದು, ಪಿಂಚಣಿ ಸಮಸ್ಯೆಯನ್ನು ಬಗೆಹರಿಸಿದೆ. ಇತ್ತೀಚಿನ ದಿನಗಳಲ್ಲಿ ಮುಷ್ಕರ ನಡೆಸಿ ಬೇಡಿಕೆಯನ್ನು ಈಡೇರಿಸಿಕೊಳ್ಳುವುದು ವಿರಳವೆಂದೇ ಹೇಳಬಹುದು. ಎಸ್.ಬಿ.ಐ ನೌಕರರು ಒತ್ತಡಗಳಿಗೆ ಮಣಿಯದೆ ನಡೆಸಿದ ಹೋರಾಟವೇ ಅವರ ಈ ವಿಜಯಕ್ಕೆ ಕಾರಣ.

* * * *

(5ನೇ ಪುಟ ನೋಡಿ)



ಹಿಂದಿನ ದಿನಗಳಲ್ಲಿ ಮನೆಯ ಗೃಹಿಣಿಯೇ ಮನೆಯ ಎಲ್ಲಾ ಕೆಲಸಗಳನ್ನು ನಿಭಾಯಿಸುತ್ತಿದ್ದಳು. ಆದರೆ ಕಾಲ ಬದಲಾದಂತೆ ಮಹಿಳೆಯರು ಹೊರಗಿನ ಪ್ರಪಂಚಕ್ಕೆ ಕಾಲಿಡುತ್ತಿದ್ದಂತೆ, ತಮ್ಮ ಗೃಹಕೃತ್ಯಗಳನ್ನು ನಿಭಾಯಿಸಲು ಅವರಿಗೆ ಸಮಯವೇ ಇಲ್ಲದಂತಾಯಿತು. ಈ ಪರಿಸ್ಥಿತಿಯು ಹಲವು ಹೆಣ್ಣುಮಕ್ಕಳಿಗೆ ಜೀವನದ ದಾರಿಯನ್ನು ಕಲ್ಪಿಸಿತು. ತಮ್ಮ ಅನಕ್ಷರತೆಯಿಂದ ಯಾವುದೇ ಕೆಲಸಕ್ಕೂ ಯೋಗ್ಯರಲ್ಲವೆಂದು ಭಾವಿಸಿದ್ದ ಇವರು, ಇಂದು ಹಲವು ಮನೆಯ ಗೃಹಕೃತ್ಯ ನಿಭಾಯಿಸುವುದರಿಂದ ತಮ್ಮ ಜೀವನ ನಡೆಸುವುದರ ಜೊತೆಗೆ, ಮನೆಯೊಡೆಯರ ಕೆಲಸದ ಹೊರೆಯನ್ನು ಕಡಿಮೆಗೊಳಿಸಿ ಅವರ ಕೊಡುಗೆಯನ್ನು ದೇಶಕ್ಕೆ ಸಲ್ಲಿಸಲು ನೆರವಾಗುತ್ತಿದ್ದಾರೆ.

ಒಂದು ದಿನ ಈ ಕೆಲಸಕ್ಕೆ ಕಾರ್ಮಿಕರು ಹಾಜರಾಗಲಿಲ್ಲವೆಂದರೆ ಆಕಾಶವೇ ಕಳಚಿ ತಲೆಮೇಲೆ ಬಿದ್ದಂತೆ ಕಂಗಾಲಾಗುವ ಪರಿಸ್ಥಿತಿಯೀಗ ಇದೆ. ಆದರೆ ಅವರ ಸಮಸ್ಯೆಗಳತ್ತ ನಾವೆಂದಾದರೂ ಯೋಚಿಸಿದ್ದೇವೆಯೇ? ಯಾವುದೇ ರೀತಿಯ ಕೆಲಸದ ಭದ್ರತೆಯಿಲ್ಲದ ಸೇವಾವಧಿಗೆ ಸೂಕ್ತ ಪ್ರತಿಫಲವಿಲ್ಲದೆ, ರಜೆ, ಬೋನಸ್‌ಗಳ ಸೌಲಭ್ಯವಿಲ್ಲದೆ ದುಡಿವ ಇವರ ಪಾಡುಗಳತ್ತ ಕೊಂಚ ಗಮನ ಹರಿಸೋಣ.

- ಒಂದು ದಿನ ಹುಷಾರಿಲ್ಲಾಂತ ರಜೆ ಹಾಕಿದ್ರೆ, ಬೇರೆಯವರನ್ನ ಕೆಲಸಕ್ಕೆ ತೊಗೋತೀವಿ ಅಂತಾರೆ
- ಮನೆಯಲ್ಲಿ ಯಾವುದೇ ವಸ್ತು ಕಳವಾದ್ರೂ ಮೊದಲಿಗೆ ನಮ್ಮ ಮೇಲೆಯೇ ಅನುಮಾನ ಪಡ್ತಾರೆ

## ಸಂಘ ಕಟ್ಟಿ ಸಮಸ್ಯೆ ಬಗೆಹರಿಸಿಕೊಳ್ಳುತ್ತಿರುವವರು

- ಹಬ್ಬ-ಹರಿದಿನ ಅಂದ್ರೆ ನಮಗೆ ರಜೆ ಇಲ್ಲ, ಬದಲಿಗೆ ಹೆಚ್ಚು ಕೆಲಸ ಮಾಡಿಸಿಕೊಳ್ಳುತ್ತಾರೆ.
- ಅವರ ಮನೆ ಟಾಯ್ಲೆಟ್ ಉಪಯೋಗಿಸುವಂತಿಲ್ಲ, ಕಾಫಿ-ತಿಂಡಿಗೆ ಪ್ರತ್ಯೇಕ ತಟ್ಟೆ-ಲೋಟ. ನಾವು ಉಪಯೋಗಿಸಿದಮೇಲೆ ಬಾಗಿಲ ಹಿಂದೆ ಅಥವಾ ಮೆಟ್ಟಿಲ ಕೆಳಗೆ ಇಡಬೇಕು.
- ಕೆಲಸಕ್ಕೆ ಸೇರಿಸಿಕೊಳ್ಳಬೇಕಾದರೆ ಕೆಲವೇ ಕೆಲಸ ಎಂದು ಹೇಳಿರುತ್ತಾರೆ. ಕೆಲಸಕ್ಕೆ ಸೇರಿದ ಮೇಲೆ ಮನೆಯ ಎಲ್ಲಾ ಕೆಲಸವನ್ನೂ ಹೇಳುತ್ತಾರೆ.
- ವಾರಕ್ಕೆ ಒಂದು ರಜೆಯೂ ಇಲ್ಲ
- ವರ್ಷಗಟ್ಟಲೇ ಕೆಲಸ ಮಾಡಿದರೂ ಬೋನಸ್ಸೂ, ಗ್ರಾಚುಯಿಟಿ, ಪಿಂಚಣಿಗಳ ಸೌಲಭ್ಯವಿಲ್ಲ.

ಹೀಗೆ ಬಹುಶಃ ಎಲ್ಲಾ ಗೃಹಕೃತ್ಯ ಕಾರ್ಮಿಕರೂ ಅವಲತ್ತುಗೊಳ್ಳುವುದನ್ನು ನಾವು-ನೀವೆಲ್ಲಾ ಕೇಳಿರುತ್ತೇವೆ. ಈ ಕಾರ್ಮಿಕರು ಈ ಮಟ್ಟದಲ್ಲಿ ಕೆಲಸದ ಅಭದ್ರತೆಯನ್ನು ಅನುಭವಿಸುತ್ತಿರಲು ಮುಖ್ಯವಾದ ಕಾರಣವೆಂದರೆ, ಇವರು ಯಾರೂ ಒಂದೆಡೆ ಕೆಲಸ ಮಾಡುತ್ತಿಲ್ಲ, ಆದ್ದರಿಂದಲೇ ಒಕ್ಕೊರಲಿನಿಂದ ತಮ್ಮ ಬೇಡಿಕೆಗಳನ್ನು ಆಗ್ರಹಿಸಲು ಸಾಧ್ಯವಾಗುತ್ತಿಲ್ಲ.

ಸುಮಾರು 5 ವರ್ಷಗಳಿಂದ ಕೆಲಸ ಮಾಡುತ್ತಿದ್ದ ಮನೆಯಲ್ಲಿ 50 ರೂ ಹೆಚ್ಚಿಗೆ ಕೊಡಿ ಎಂದಿದ್ದಕ್ಕೆ "ನೀನು ಕೆಲಸಕ್ಕೇ ಬೇಡ, ಬೇರೆಯವರು ಬೇಕಾದಷ್ಟು ಮಂದಿ ಸಿಗುತ್ತಾರೆ" ಎಂದು ತನ್ನನ್ನು ಕೆಲಸದಿಂದಲೇ ವಜಾಗೊಳಿಸಿದರು ಎಂದು ತಮ್ಮ ಸಂಕಟ ತೋಡಿಕೊಳ್ಳುತ್ತಾರೆ ರಾಗಿಗುಡ್ಡದ 30 ವರ್ಷ ವಯಸ್ಸಿನ ಪುಷ್ಪಾ.

ಆದರೆ ಸಾಧನೆಗೆ ಅಸಾಧ್ಯವಾದುದು ಯಾವುದೂ ಇಲ್ಲ ಎಂಬಂತೆ, ಗೃಹಕೃತ್ಯ ಕಾರ್ಮಿಕರೂ ಸಹ ಸಂಘಟಿತರಾಗಿದ್ದರೆ, ಕಳೆದ 2003 ರಲ್ಲಿ ನೊಂದಾಯಿಸಲ್ಪಟ್ಟ "ಕರ್ನಾಟಕ ಗೃಹಕೃತ್ಯ ಕಾರ್ಮಿಕರ ಸಂಘ (Karnataka Domestic Workers Union)"ದಲ್ಲಿ ಈವರೆಗೆ ಸುಮಾರು ಮೂರುಸಾವಿರ ಮಂದಿ ಸಾಮಾನ್ಯ ಸದಸ್ಯರಿದ್ದು, ಸುಮಾರು 150 ಮಂದಿ ಸಕ್ರಿಯವಾಗಿ ಹೋರಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಈವರೆಗೆ ಹಲವು ಕಾರ್ಮಿಕ ವ್ಯಾಜ್ಯಗಳನ್ನು ಮಾತುಕತೆ ಮೂಲಕ ಸಂಘವು ಪರಿಹರಿಸಿದೆ. 2 ಪ್ರಕರಣಗಳನ್ನು ಕಾರ್ಮಿಕ ಇಲಾಖೆಯವರೆಗೂ ಒಯ್ದಿದೆ. ಇದು ಕಾರ್ಮಿಕ ಇಲಾಖೆಗೆ ಬಂದ ಮೊದಲ ಗೃಹಕೃತ್ಯ ಕಾರ್ಮಿಕರ ವ್ಯಾಜ್ಯವಾಗಿದ್ದು, ಇದರ ಗೆಲುವಿನಲ್ಲಿ ಸಂಘದ ಗೆಲುವು ಅಡಗಿದೆ ಎಂದು ಈ ಕಾರ್ಮಿಕರನ್ನು ಸಂಘಟಿಸುತ್ತಿರುವ ಕಾರ್ಯಕರ್ತೆ ಇಂದಿರಾ ಅಭಿಪ್ರಾಯಪಡುತ್ತಾರೆ.

ಸಂಘವು ಕಾರ್ಮಿಕ ಸಮಸ್ಯೆಗಳಿಗೆ ಮಾತ್ರವಲ್ಲದೆ, ಸ್ಥಳೀಯ ಸಮಸ್ಯೆಗಳಿಗೂ ಸ್ಪಂದಿಸುತ್ತಾ ಬಂದಿದ್ದು, ರಾಗಿಗುಡ್ಡದ ಸ್ಲಮ್‌ನಲ್ಲಿದ್ದ ಸಾರಾಯಿ ಅಂಗಡಿಯನ್ನು ಮುಚ್ಚಿಸಿದ್ದಾರೆ. ಅಲ್ಲದೆ ಅನೇಕ ಪ್ರಕರಣಗಳನ್ನು ಪೊಲೀಸ್ ಠಾಣೆಯವರೆಗೂ ಒಯ್ದಿದ್ದಾರೆ. ಪ್ರಮುಖವಾಗಿ




ಅಲ್ಲಿನ ನ್ಯಾಯ ಬೆಲೆ ಅಂಗಡಿ ಸಮಸ್ಯೆಯನ್ನು ಸ್ವತಃ ಪರಿಹರಿಸಿಕೊಂಡಿದ್ದಾರೆ. ಸುಮಾರು 3000 ಮಂದಿಗೆ ಒಂದೆ ದಿನ ದಿನಸಿ ಕೊಡುತ್ತೇವೆಂದು ಹೇಳಿ ಕೇವಲ 150-200 ಮಂದಿಗೆ ನೀಡಿದ ತಕ್ಷಣ ಉಳಿದವರ ಸೀಮೆಎಣ್ಣೆ ಡಬ್ಬಗಳನ್ನು ಕಾಲಿನಿಂದ ಒದ್ದು, ಜನರನ್ನು ಚದುರಿಸುತ್ತಿದ್ದ ಪದ್ಧತಿಗೆ ಸಂಘ ಕಡಿವಾಣ ಹಾಕಿದೆ. ವಿಜಿಲೆನ್ಸ್ ಕಮಿಟಿಯ ಸದಸ್ಯರಾಗಿದ್ದುಕೊಂಡು, ವಾರದಲ್ಲಿ ಒಂದು ದಿನ ಸಭೆ ಸೇರಿ ಸಮಸ್ಯೆಗಳತ್ತ ಗಮನ ಹರಿಸುತ್ತಾರೆ. ಈ ಎಲ್ಲರಿಗೂ ನ್ಯಾಯಯುತವಾಗಿ ದಿನಸಿ ದೊರೆಯುತ್ತದೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ.


ಬೆಂಗಳೂರು ಮಾತ್ರವಲ್ಲದೆ ಇಡೀ ರಾಜ್ಯಾದ್ಯಂತ ಗೃಹಕೃತ್ಯ ಕಾರ್ಮಿಕರಿಗೆ ಅನುಕೂಲವಾಗುವಂತಹ ಹಲವು ಕಾನೂನು ಜಾರಿಗೊಳಿಸಬೇಕು ಎಂದು ಈ ಸಂಘದ ಆಗ್ರಹ. ಸರ್ಕಾರ 2004 ರ ಮಾರ್ಚ್‌ನಲ್ಲಿ ಈ ಕಾರ್ಮಿಕರಿಗೆ ಕನಿಷ್ಠವೇತನ ಜಾರಿಗೆ ತಂದಿದ್ದು, ಅದು ಅವಾಸ್ತವಿಕತೆಯಿಂದ ಕೂಡಿದೆ. ಆದ್ದರಿಂದ ಅದನ್ನು ಸಂಪೂರ್ಣ ಪರಿಷ್ಕರಿಸಿ, ನ್ಯಾಯಯುತ ವೇತನ ಜಾರಿಗೊಳಿಸಬೇಕು ಎಂದು ಸಂಘವು ಹೋರಾಡುತ್ತಿದೆ. ಇದಲ್ಲದೆ ಕಾರ್ಮಿಕರಿಗೆ ರಜೆ ಸೌಲಭ್ಯ, ಬೋನಸ್, ಗ್ರಾಚುಯಿಟಿ, ಪಿಂಚಣಿ, ಆರೋಗ್ಯ ವಿಮೆ ಮುಂತಾದುವು ಕಡ್ಡಾಯವಾಗಬೇಕು, ಅಲ್ಲಿಯವರೆವಿಗೂ ನಮ್ಮ ಹೋರಾಟ ನಿಲ್ಲದು ಎನ್ನುತ್ತಾರೆ ಮತ್ತೊಬ್ಬ ಕಾರ್ಯಕರ್ತೆ ರಮಾ. ಸಾಧನೆಗೆ ಕೊನೆ ಇದೆಯೇ?

ಇವರ ಈ ಹೋರಾಟಕ್ಕೆ 'ಮುನ್ನಡೆ' ಬೆಂಬಲ ಸೂಚಿಸುತ್ತಿದೆ. □



Scanned with OKEN Scanner

"ಬೆಳಗ್ಗೆ 4.00 ಗಂಟೆಗೆ ಎದ್ದು, ಸಿದ್ಧವಾಗಿ ಊಟ ಕಟ್ಟಿಕೊಂಡು 5.30 ರ ಕಿತ್ತೂರು ರಾಣಿ ಚೆನ್ನಮ್ಮ ಎಕ್ಸ್‌ಪ್ರೆಸ್ ಗೆ ಹೋಗ್ತೀವಿ. 7.30 ಕ್ಕೆ ಯಶವಂತಪುರದಲ್ಲಿ ಇಳಿದು, ಅಲ್ಲಿಯೇ ಮುಖ ತೊಳೆದು, ತಲೆಬಾಚಿ ಕೊಂಡು ತಿಂಡಿ ತಿಂತೀವಿ. 8.30 ರ ವರೆಗೆ ಸ್ಟೇಷನ್ ನಲ್ಲಿಯೇ ಇದ್ದು, ಆಮೇಲೆ 9 ಗಂಟೆಯ ಹೊತ್ತಿಗೆ ಫ್ಯಾಕ್ಟರಿಗೆ ಹೋಗ್ತೀವಿ. ರಾತ್ರಿ ಮನೆ ಸೇರೋದು 8.30 ರಿಂದ 9.00 ಗಂಟೆ ಆಗುತ್ತೆ"




ಸ್ನೇಹಿತರೇ, ಇದು ತುಮಕೂರಿನಲ್ಲಿ ವಾಸವಿದ್ದು, ಪ್ರತಿದಿನ ಬೆಂಗಳೂರಿನ ಗಾರ್ಮೆಂಟ್ಸ್ ಕಾರ್ಖಾನೆಗೆ ಬರುವ ಮಹಿಳೆಯೊಬ್ಬರ ದಿನಚರಿ. ಎಲ್ಲರ ಬೆಳಗಿನ ಮುಂಜಾವು ಮನೆಯಲ್ಲಿ ಆರಂಭವಾದರೆ ನಮ್ಮ ಅನೇಕ ಸ್ನೇಹಿತರದು ರೈಲಿನಲ್ಲಿ ಪ್ರಾರಂಭವಾಗುತ್ತಿದೆ. ಎಂದರೆ ನಂಬಲೇಬೇಕು.

ಬೆಂಗಳೂರಿಗೆ ಪ್ರತಿದಿನ ತುಮಕೂರು, ದೊಡ್ಡಬೆಲೆ, ಕೋಲಾರ, KGF, ದೊಡ್ಡಬಾಣಾವರ,

# ರೈಲಿನಲ್ಲಿ ಅರಳುವ ಮುಂಜಾವು



ಮಂಡ್ಯ, ಮದ್ದೂರು, ಚೆನ್ನಪಟ್ಟಣ, ಶಿವಪುರ, ಶ್ರೀರಂಗಪಟ್ಟಣದಂತಹ ದೂರದ ಊರುಗಳಿಂದ ಮಹಿಳಾ ಕಾರ್ಮಿಕರು ಗಾರ್ಮೆಂಟ್ಸ್ ಕಾರ್ಖಾನೆಗಳಿಗೆ ಕೆಲಸಕ್ಕೆ ಬಂದು ಹೋಗಿ ಮಾಡುತ್ತಿದ್ದಾರೆ. ಇವರು ತಮ್ಮ ಸಮಯವನ್ನು ಹೇಗೆ ಹೊಂದಿಸಿಕೊಳ್ಳುತ್ತಾರೆ? ದುಡಿಮೆ ಹಾಗೂ ಓಡಾಟಗಳಲ್ಲಿ ದಿನದ 18 ರಿಂದ 20 ಗಂಟೆ ಕಳೆಯುವ ಇವರ ನಿದ್ರೆಗೆ ಸಮಯವೆಲ್ಲಿ? ಮಕ್ಕಳನ್ನು ನೋಡಲು ಸಮಯವೆಲ್ಲಿ? ಕನಿಷ್ಠ ತಮ್ಮ ಕೆಲಸ ಕಾರ್ಯಗಳಿಗೆ ಸಮಯವೆಲ್ಲಿ?

ಸ್ನೇಹಿತರೇ ಗಮನಿಸಿ ಇದು ಇಂದಿನ ಕಾರ್ಮಿಕರ. ವಾಸ್ತವ ಪರಿಸ್ಥಿತಿ. ತುಮಕೂರಿನಿಂದ ಬರುವ ಕಾರ್ಮಿಕ ಗೆಳತಿಯೊಬ್ಬರು ಹೇಳುವಂತೆ "ತುಮಕೂರಿನಲ್ಲಿ ಯಾವ ಕೆಲಸ ಸಿಗುತ್ತದೆ? ಬಟ್ಟೆ ಅಂಗಡಿ, ಉಪ್ಪಿನಕಾಯಿ ಮಾಡುವ ಕಾರ್ಖಾನೆ ಇಲ್ಲವೇ ಮೊಬೈಲ್ ಸೇಲ್ ಅಂಗಡಿಗಳಲ್ಲಿ ಕೆಲಸ ಮಾಡಬೇಕು. ಅಲ್ಲಿ 600 ರಿಂದ 800 ರವರೆಗೆ ಸಂಬಳ ನೀಡುತ್ತಾರೆ. ಬೆಂಗಳೂರಿನಲ್ಲಿ ಗಾರ್ಮೆಂಟ್ಸ್ ಕಾರ್ಖಾನೆಗಳು ತುಂಬಾ ಇದೆ. ಇಲ್ಲಿ ಸಂಬಳ ಹೆಚ್ಚು ಸಿಗುತ್ತದೆ. ಅದಕ್ಕೆ ಇಷ್ಟು ಕಷ್ಟ ಆದರೂ ಸಹ ಇಲ್ಲಿಗೇ ಕೆಲಸಕ್ಕೆ ಬರ್ತೀವಿ"

ಬೆಳಗ್ಗೆ ಎದ್ದು, ಮನೆಯವರೆಲ್ಲರಿಗೂ ಅಡುಗೆ ಮಾಡಿಟ್ಟು, ಮಕ್ಕಳನ್ನು ಪಕ್ಕದ ಮನೆಯವರಿಗೆ ಒಪ್ಪಿಸಿ, ತನ್ನ ಕೆಲಸ ಕಾರ್ಯಗಳನ್ನು ಮಾಡಿಕೊಂಡು, ಮನೆಯಿಂದ ಸ್ಟೇಷನ್ ತಲುಪಿ, ರೈಲಿನಲ್ಲಿ ಪ್ರಯಾಣಿಸಿ, ಫ್ಯಾಕ್ಟರಿಯಲ್ಲಿ ಒಂದು ನಿಮಿಷವೂ ವ್ಯರ್ಥವಾಗದಂತೆ ಕೆಲಸ ಮಾಡಿ ಮತ್ತೆ ಮನೆ ಸೇರುವ ಈ ಕಾರ್ಮಿಕರ ದಿನಚರಿ ಎಷ್ಟು ಬಿಗಿ ಎನಿಸುತ್ತದೆ ಅಲ್ಲವೇ? ನಿತ್ಯವೂ ಬೆಂಗಳೂರಿಗೆ ಓಡಾಡುವ ರೈಲು ಇವರ ಜೀವನಾಧಾರ. ಏಕೆಂದರೆ ಅಲ್ಲಿ ಪಾಸ್‌ನ ದರ ಇತರ ಓಡಾಟದ ದರಗಳಿಗೆ ಹೋಲಿಸಿದರೆ ಬಹಳ ಕಡಿಮೆ. 236 ರೂ (ಯಾವ ರೈಲಿನಲ್ಲಿ ಬೇಕಾದರೂ) ಹಾಗೂ 147(ಕೇವಲ ಪುಶ್‌ಪುಲ್ ರೈಲಿಗೆ) ರೂ. ಗಳ ಪಾಸ್ ಮಾಡಿಸಿದರೆ ತಿಂಗಳೆಲ್ಲಾ ತೊಂದರೆಯಿಲ್ಲದೆ ಓಡಾಡಬಹುದು.

ಇವರು ಹೀಗೆ ತಮ್ಮ ಸಮಯವನ್ನೆಲ್ಲಾ ಕಳೆದು ದುಡಿಯಲು ಮನೆಯವರ ಒಪ್ಪಿಗೆ ಇದೆಯೇ ಎಂಬ ಪ್ರಶ್ನೆಗೆ, ಈಗಿನ ಕಾಲದಲ್ಲಿ ಒಬ್ಬರ ದುಡಿಮೆ ಎಲ್ಲಿ ಸಾಲುತ್ತದೆ? ಆದ್ದರಿಂದ ಮನೆಯವರ ಒಪ್ಪಿಗೆಯನ್ನು ಪಡೆದೇ ಕೆಲಸಕ್ಕೆ ಬರುತ್ತೇವೆ ಎನ್ನುತ್ತಾರೆ. ಕೆಲವರು ಮನೆಯ ಪರಿಸ್ಥಿತಿಗೆ, ಕೆಲವರು ತಮ್ಮ ಹಣ ತಾವು ಸಂಪಾದಿಸುವ ಆಕಾಂಕ್ಷೆಯಿಂದ, ಅಲ್ಲಿ ಸಿಗುವ ಬೇರೆ ಕೂಲಿ ಕೆಲಸಗಳು ಇಷ್ಟವಿಲ್ಲದೆ, ಬೆಂಗಳೂರಿಗೆ ಕೆಲಸಕ್ಕೆ ಬರುತ್ತಿದ್ದಾರೆ.

ಈ ಕಾರ್ಮಿಕರಿಗೆ ನಿಜವಾದ ತೊಂದರೆ ಆಗುವುದು, ರೈಲು ತಡವಾಗಿ ತಮ್ಮ ಊರು ತಲುಪುವಾಗ. ತಡವಾಗಲು ಮುಖ್ಯ ಕಾರಣ ರೈಲ್ವೆ ಕ್ರಾಸಿಂಗ್, ಅರ್ಧ ಗಂಟೆ ಹೆಚ್ಚು ಕಡಿಮೆಯಾದರೆ ಇವರು ಮನೆ ಸೇರುವುದು 11.00 ಗಂಟೆಯಾಗುತ್ತದೆ. ಅಂತಹ ಉದಾಹರಣೆಗಳೂ ಸಹ ಬಹಳ ಇವೆ.

ತನ್ನ ಆರೋಗ್ಯವನ್ನೂ ಲೆಕ್ಕಿಸದೆ, ಕಣ್ತುಂಬಾ ನಿದ್ರೆಯನ್ನೂ ಮಾಡದೆ ಕೇವಲ ಒಂದು ಯಂತ್ರದಂತೆ ತಮ್ಮ ದಿನಚರಿಯನ್ನು ಹೊಂದಿಸಿಕೊಂಡು, ಅದರಂತೆ ಚಾಚೂ ತಪ್ಪದೆ ನಡೆಯುವ ಈ ಕಾರ್ಮಿಕರ ಉತ್ಸಾಹಕ್ಕೆ ಮುನ್ನಡೆ ಅಭಿನಂದಿಸುತ್ತಿದೆ. ❑

*ಕಾರ್ಮಿಕರೇ ಗಮನಿಸಿ,*

ಮಾನ್ಯ ಕಾರ್ಮಿಕ ಸಚಿವರಾದ ಶ್ರೀ ಇಕ್ಬಾಲ್ ಅನ್ಸಾರಿ ಅವರು ಅಸಂಘಟಿತ ಕ್ಷೇತ್ರದ ಕಾರ್ಮಿಕರ ಬಗ್ಗೆ ಅತಿ ಹೆಚ್ಚು ಕಾಳಜಿ ವಹಿಸುತ್ತಿದ್ದಾರೆ. ಅವರಲ್ಲಿಯೂ ಮುಖ್ಯವಾಗಿ ಗಾರ್ಮೆಂಟ್ಸ್ ಕಾರ್ಮಿಕರ ಬಗ್ಗೆ ಹೆಚ್ಚಿನ ಗಮನಹರಿಸುತ್ತೇನೆಂದು ಭರವಸೆ ನೀಡಿದ್ದಾರೆ. ಮತ್ತು ಗಾರ್ಮೆಂಟ್ಸ್ ಕಾರ್ಮಿಕರಿಗೆ ಕಾರ್ಖಾನೆಯಲ್ಲಿ ಯಾವುದೇ ರೀತಿಯ ತೊಂದರೆಯಾದರೂ ನೇರವಾಗಿ ತಮ್ಮನ್ನು ಸಂಪರ್ಕಿಸಬಹುದು ಹಾಗೂ ದೂರು ನೀಡುವವರ ವಿವರಗಳನ್ನು ಗೌಪ್ಯವಾಗಿ ಇಡಲಾಗುವುದೆಂದು ಹೇಳಿದ್ದಾರೆ. ಆದ್ದರಿಂದ ದಯವಿಟ್ಟು ತಾವು ಯಾವುದೇ ಸಮಸ್ಯೆಯಾದಲ್ಲಿ ಮಾನ್ಯ ಸಚಿವರನ್ನು ಈ ಸಂಖ್ಯೆಯಲ್ಲಿ ಸಂಪರ್ಕಿಸಬಹುದು : 22252475

*(ಪತ್ರಿಕಾ ವರದಿಗಳು)*

"ಮಹಿಳೆಯರು ಮಾನಸಿಕವಾಗಿ ಗಟ್ಟಿಗರು, ಅವರಿಗೆ ಜವಾಬ್ದಾರಿಯ ಪ್ರಜ್ಞೆ ಹೆಚ್ಚು. ಮಾಡುವ ಕೆಲಸಕ್ಕೆ ಬದ್ಧರಾಗಿರುತ್ತಾರೆ. ಕಾರ್ಮಿಕ ಸಂಘಟನೆಗಳಲ್ಲಿಯೂ ಸಹ ಮಹಿಳೆಯರು ಹೆಚ್ಚಿನ ಪಾತ್ರ ವಹಿಸಬಲ್ಲರು. ಆದರೆ ಸಂಘಟನೆಯ ಸ್ವರೂಪ ಮಹಿಳೆಯರಿಗೆ ಅವಕಾಶ ನೀಡುವಂತಿರಬೇಕು"

ಮಹಿಳೆಯರ ಬಗ್ಗೆ ಇಷ್ಟು ಹೆಮ್ಮೆಯಿಂದ, ಸಕಾರಾತ್ಮಕವಾಗಿ ಮಾತನಾಡುವ, ಅಮರ್ ಜಿತ್ ಕೌರ್ ಸಂಘಟಕಿಯಾಗಿ ಸಾಧಿಸಿರುವ ಸಾಧನೆ ಬಹಳ ದೊಡ್ಡಮಟ್ಟದ್ದು.

'ಎ.ಐ.ಟಿ.ಯು.ಸಿ ಕಾರ್ಮಿಕ ಸಂಘಟನೆ'ಯ ರಾಷ್ಟ್ರೀಯ ಕಾರ್ಯದರ್ಶಿ, 'ನ್ಯಾಶನಲ್ ಫೆಡರೇಶನ್ ಆಫ್ ಇಂಡಿಯನ್ ವಿಮೆನ್'ನ ಉಪಾಧ್ಯಕ್ಷರು ಮತ್ತು 'ಆಲ್ ಇಂಡಿಯಾ ಅಂಗನವಾಡಿ ವರ್ಕರ್ಸ್ ಫೆಡರೇಶನ್'ನ ಕಾರ್ಯದರ್ಶಿಯಾಗಿ ಸಮರ್ಥವಾಗಿ ಕಾರ್ಯ ನಿರ್ವಹಿಸುತ್ತಿರುವ ಅಮರ್‌ಜೀತ್ ಕೌರ್ ರವರು ನಡೆದು ಬಂದ ದಾರಿಯೇನೂ ಸುಗಮವಾಗಿರಲಿಲ್ಲ.

ವಿದ್ಯಾರ್ಥಿ ಜೀವನದಿಂದಲೇ ರಾಜಕೀಯದಲ್ಲಿ ಸಕ್ರಿಯವಾಗಿ ತೊಡಗಿದ್ದು, ವಿದ್ಯಾರ್ಥಿ ಸಂಘಟನೆಯಲ್ಲಿ ಪಾಲ್ಗೊಂಡಿದ್ದ ಅಮರ್‌ಜೀತ್ ಕೌರ್ ಮಹಿಳಾ ಪ್ರಶ್ನೆಗಳಿಗೆ, ನಾಯಕತ್ವಕ್ಕೆ ಪ್ರತಿ ಸಭೆಯಲ್ಲಿಯೂ ಪಟ್ಟುಬಿಡದೆ ಹೋರಾಡಿದವರು. ಪುರುಷ ಪ್ರಧಾನ ಸಮಾಜದಲ್ಲಿ ಮಹಿಳಾ ನಾಯಕತ್ವ ಕೊಂಚ ಹಿಂದೆಯೇ ಇದೆ. 1919ರಲ್ಲಿ ಎಐಟಿಯುಸಿ (ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್) ಸ್ಥಾಪನೆಯಾದಾಗ ಸಂಘಟಿತ ಅಸಂಘಟಿತ ಕಾರ್ಮಿಕರು ಎಂಬ ಬೇಧ ಭಾವವೇ ಇರಲಿಲ್ಲ. ಅಂದಿನ ಪರಿಸ್ಥಿತಿಯಲ್ಲಿ ಯಾವ ಉದ್ಯೋಗಕ್ಕೂ ಭದ್ರತೆ ಇರಲಿಲ್ಲ. ಆ ಸಂದರ್ಭದಲ್ಲಿ ಕಾರ್ಮಿಕರನ್ನು ಸಂಘಟಿಸಲು ಮಹಿಳೆಯರು ಬಹಳ ಸಕ್ರಿಯವಾದ ಪಾತ್ರ ವಹಿಸಿದ್ದರು. ಪರಿಣಾಮವಾಗಿ ಕಾರ್ಮಿಕರಿಗಾಗಿ ಅನೇಕ ಕಾಯಿದೆ ಕಾನೂನುಗಳು ಜಾರಿಯಾದವು. ಆದರೆ ಸ್ವತಂತ್ರ್ಯಾನಂತರ ಮಹಿಳಾ ನಾಯಕತ್ವ ಕಡಿಮೆಯಾಯಿತು. ನಿರಂತರ ಪ್ರಯತ್ನದಿಂದ ಮಾತ್ರ ಕಾರ್ಮಿಕ ಸಂಘಗಳಲ್ಲಿ ಮಹಿಳೆಯರ ಸಕ್ರಿಯ ಭಾಗವಹಿಸುವಿಕೆ ಸಾಧ್ಯ ಎಂದು ಕೌರ್‌ರವರ ಅಭಿಪ್ರಾಯ.

ತಾವು ಸಂಘಟಕಿಯಾಗಿ, ಮಹಿಳೆಯಾಗಿ, ಕ್ಲಿಷ್ಟಕರ ಪರಿಸ್ಥಿತಿಯನ್ನು ಯಾವ ರೀತಿ ಸಮರ್ಥವಾಗಿ ನಿಭಾಯಿಸಿದೆ ಎಂಬುದನ್ನು ಕೌರ್‌ರವರು ನೆನಪಿಸಿಕೊಳ್ಳುತ್ತಾ "ಡಂಕೆಲ್ ಪ್ರಸ್ತಾವನೆಗೆ ಭಾರತ ಸಹಿ ಮಾಡಿದ್ದರ ವಿರುದ್ಧ 1994 ರಲ್ಲಿ ನವದೆಹಲಿಯಲ್ಲಿ ಸುಮಾರು ಮೂರು ಲಕ್ಷದಷ್ಟು ಮಂದಿ ಸೇರಿ ಪ್ರತಿಭಟನೆ ಹಮ್ಮಿ ಕೊಂಡ ಸಂದರ್ಭದಲ್ಲಿ, ಪೊಲೀಸರ ಲಾಠಿಚಾರ್ಜ್, ಅಶ್ರುವಾಯು ಸಿಡಿತಗಳನ್ನು ಎದುರಿಸಲಾಗದೆ ಕೆಲವು ನಾಯಕರು ಹೊರಟುಹೋದರು. ನಾನು ಸೀದಾ ನುಗ್ಗಿ ಜನರು ಹಾಗೂ ಪೊಲೀಸರ ಮಧ್ಯೆ ನಿಂತೆ, ಸಿಟ್ಟಿಗೆದ್ದ ಜನ ಒಂದೆಡೆ, ಯುದ್ಧ ಮಾಡಲು ಸಿದ್ಧವಾಗಿ ನಿಂತ ಪೊಲೀಸರು ಒಂದು ಕಡೆ. ಪೊಲೀಸರೊಡನೆ ವಾದಕ್ಕೆ ನಿಂತು, ಜನರನ್ನು ನಿಯಂತ್ರಿಸಿ, ಗೋಲಿಬಾರ್ ಆಗುವುದನ್ನು ತಡೆದೆ, ಗುಂಪು ಹಿಂಸೆಗಿಳಿಯುತ್ತಿದೆ ಎಂದಾಗ ನಾನು ಸುಮ್ಮನೆ ನುಗ್ಗಿ ನಡುವೆ ನಿಂತುಬಿಡುತ್ತೇನೆ" ಎನ್ನುತ್ತಾರೆ.

ಸಾರ್ವಜನಿಕ ಜೀವನದಲ್ಲಿ ತೊಡಗಿರುವ ಮಹಿಳೆಯರು, ತಾವು ಸಂಸಾರಕ್ಕೆ ಮಕ್ಕಳಿಗೆ ಹೆಚ್ಚಿನ ಗಮನ ನೀಡಲಿಲ್ಲವೆಂದು ಕೊರಗುವುದರಿಂದ ಹೊರಬರಬೇಕು ಎಂದು ಅಭಿಪ್ರಾಯ ಪಡುವ ಕೌರ್ ರವರು ತಮ್ಮ ಸಾಂಸಾರಿಕ ಜೀವನದಲ್ಲಿಯೂ ಸಂಕಷ್ಟದ ಪರಿಸ್ಥಿತಿಯನ್ನು ತಾಳ್ಮೆಯಿಂದ ನಿಭಾಯಿಸಿದವರು.

ಸಮಾಜದಲ್ಲಿ ಹೆಣ್ಣನ್ನು ದುರ್ಗೆ, ಎಂದು ಪೂಜಿಸುವ ಜನರು, ಹೆಣ್ಣು ವಾಸ್ತವದಲ್ಲಿ ದುರ್ಗೆಯಾದಾಗ ಅವಹೇಳನ ಮಾಡುತ್ತಾರೆ ನಾವು ದೇವರಾಗುವುದು ಬೇಡ, ಹಸಿವು, ನಿದ್ದೆ, ಭಾವನೆ ಪ್ರೀತಿ ಇರುವ ಮನುಷ್ಯರಾಗೋಣ ಎಂದು ಕೌರ್, ಮಹಿಳೆಯರಿಗೆ ಕರೆನೀಡುತ್ತಾರೆ.



ಸಂಘಟಿತ ಕಾರ್ಮಿಕರು, ಹಾಗೂ ಅಸಂಘಟಿತ ಕಾರ್ಮಿಕರಿಬ್ಬರನ್ನೂ ಸಂಘಟಿಸಿ ಅನುಭವವಿರುವ ಕೌರ್‌ರವರು

# ಸಾಧಕ ವನಿತೆಯರು

ಎರಡರ ನಡುವಿನ ವ್ಯತ್ಯಾಸವನ್ನು ಹೀಗೆ ಗುರುತಿಸುತ್ತಾರೆ. "ಸಂಘಟಿತ ಕ್ಷೇತ್ರದಲ್ಲಿ ಮಹಿಳೆಯರು ಒಂದೇ ಕಡೆ ಕೆಲಸ ಮಾಡುವುದರಿಂದ ಅವರನ್ನು ಸಂಘಟಿಸುವುದು ಸುಲಭ. ಆದರೆ ಅವರು ತಮ್ಮ ಸಮಸ್ಯೆಗಳಿಗೆ ಮಾತ್ರವೇ ಸ್ಪಂದಿಸುತ್ತಾರೆ. ದೊಡ್ಡಮಟ್ಟದ ಸಮಸ್ಯೆಗಳಿಗೆ ಸ್ಪಂದಿಸುವುದೇ ಇಲ್ಲ. ಆದರೆ ಅಸಂಘಟಿತ ಕ್ಷೇತ್ರದಲ್ಲಿ ಮಹಿಳೆಯರು ಹಾಗಲ್ಲ. ಅವರನ್ನು ಸಂಘಟಿಸುವುದು ಕಷ್ಟವಾದರೂ ಒಮ್ಮೆ ಸಂಘಟಿತರಾದರೆಂದರೆ ತಮ್ಮ ಹಾಗೂ ದೊಡ್ಡಮಟ್ಟದ ಸಮಸ್ಯೆಗಳೆರಡಕ್ಕೂ ತೀವ್ರವಾಗಿ ಸ್ಪಂದಿಸುತ್ತಾರೆ."

ಪರಸ್ಪರ ಸಹಕಾರ, ತಂತ್ರಜ್ಞಾನದ ವಿನಿಮಯ, ಅರಿವು ಮೂಡಿಸುವುದು, ಜ್ಞಾನ ಹಂಚಿಕೊಳ್ಳುವ ಜಾಗತೀಕರಣವನ್ನು ಸ್ವಾಗತಿಸುವ ಕೌರ್ ರವರು, ಮಹಿಳೆಯರನ್ನು, ದಲಿತರನ್ನು ಕಾರ್ಮಿಕರನ್ನು ಆಕ್ರಮಿಸಿಕೊಂಡು ಲೂಟಿ ಮಾಡುವ ಬಂಡವಾಳಶಾಹಿ, ವಸಾಹತು ಶಾಹಿ ಜಾಗತೀಕರಣವನ್ನು ನಾವು ವಿರೋಧಿಸಬೇಕು ಎಂದು ಅಭಿಪ್ರಾಯ ಪಡುತ್ತಾರೆ.

ಅವರ ಈ ಸಕಾರಾತ್ಮಕ ಚಿಂತನೆಗಳು ಎಲ್ಲಾ ಮಹಿಳೆಯರಿಗೆ ಮಾರ್ಗದರ್ಶಕವಾಗಬೇಕು.

*(ಆಧಾರ : 'ಮಾನಸ' ಪತ್ರಿಕೆ, ಏಪ್ರಿಲ್ – 2005)*

## ಅರ್ಥಪೂರ್ಣಗೊಂಡ ಕಾರ್ಮಿಕ ದಿನಾಚರಣೆ

ವರದಿ

ಕಾರ್ಮಿಕ ದಿನಾಚರಣೆಯ ಅಂಗವಾಗಿ ದಿನಾಂಕ 1-5-2006 ರಂದು ಮುನ್ನಡೆ ಹಾಗೂ GATWU ಗಳು ಗಾರ್ಮೆಂಟ್ಸ್ ಕಾರ್ಮಿಕರಿಂದ ಮಾನವ ಸರಪಳಿಯನ್ನು ಆಯೋಜಿಸಿತ್ತು. ಸರ್ಕಾರಕ್ಕೆ ತಮ್ಮ ಒಗ್ಗಟ್ಟಿನ ಧ್ವನಿ ಕೇಳಿಸಬೇಕೆಂದು, ಅಂದು ಸುಮಾರು 700 ಕ್ಕಿಂತಲೂ ಹೆಚ್ಚು ಕಾರ್ಮಿಕರು ಮಹಾತ್ಮಾ ಗಾಂಧಿ ಪ್ರತಿಮೆಯ ಬಳಿ ಘೋಷಣೆಗಳನ್ನು ಕೂಗಿ ತಮ್ಮ ಬಲವನ್ನು ಪ್ರದರ್ಶಿಸಿದರು.

ಗಾರ್ಮೆಂಟ್ಸ್ ಕಾರ್ಮಿಕರಿಗೆ 8 ಗಂಟೆಯ ಕೆಲಸದ ಅವಧಿ, ನೇಮಕಾತಿ ಪತ್ರ, ದೌರ್ಜನ್ಯ ಮುಕ್ತ ಕೆಲಸದ ವಾತಾವರಣ, ಹಾಗು ದಿನಕ್ಕೆ 150 ರೂ ಗಳ ಕನಿಷ್ಠ ವೇತನವಕ್ಕಾಗಿ ಆಗ್ರಹಿಸಿ ಈ ಮಾನವ ಸರಪಳಿಯನ್ನು ರಚಿಸಲಾಗಿತ್ತು. ಮುನ್ನಡೆ ಸಲಹಾ ಮಂಡಳಿಯ ಸದಸ್ಯರಾದ, ಗೀತಾಮೆನನ್, ಡೋನಾ ಫರ್ನಾಂಡಿಸ್, ಮಂಜುನಾಥ ಅದ್ದೆ, ಎ.ಜೆ ಶ್ರೀನಿವಾಸನ್, ಗೋಪಿನಾಥ್‌ರವರು ಮಾನವ ಸರಪಳಿಯಲಿ ಭಾಗವಹಿಸಿ, ತಮ್ಮ ಬೆಂಬಲ ವ್ಯಕ್ತ ಪಡಿಸಿದರು.

ಭಾಗವಹಿಸಿದ ಕಾರ್ಮಿಕರೆಲ್ಲರಿಗೂ ಮುನ್ನಡೆ ಅಭಿನಂದಿಸುತ್ತಾ, ಕಾರ್ಮಿಕರ ಒಗ್ಗಟ್ಟು ಹೀಗೇ ಇರಬೇಕೆಂದು ಆಶಿಸುತ್ತದೆ. ☐

# ಕೌಟುಂಬಿಕ ದೌರ್ಜನ್ಯ, ಕೊನೆ ಎಂದು.....? ಹೇಗೆ......?

*ಗೆಳತಿಯರೇ,*

ರಾತ್ರಿಯ ಕತ್ತಲಿನಲ್ಲಿ ಕುಡಿದು ಬಂದ ಗಂಡನಿಂದ ಹೊಡೆತ ತಿನ್ನುವ ಮಹಿಳೆಯರು, ಕುಟುಂಬದ ಇತರ ಸದಸ್ಯರಿಂದ ಚಿತ್ರಹಿಂಸೆ ಅನುಭವಿಸುವ ಮಹಿಳೆಯರು ಬೆಳಿಗ್ಗೆ ಎದ್ದು, ಎಂದಿನಂತೆ ಕೆಲಸಕ್ಕೆ ಬರುವುದನ್ನು ನೀವು ನೋಡಿದ್ದೀರಲ್ಲವೇ?

ಮಕ್ಕಳಾಗಲಿಲ್ಲವೆಂದು ನೋಡಲು ಚೆನ್ನಾಗಿಲ್ಲವೆಂದು, ವರದಕ್ಷಿಣೆ ತರಲಿಲ್ಲವೆಂದು ಹೀಗೆ ನಾನಾ ಕಾರಣಗಳಿಗೆ ತನಗೆ ಕುಟುಂಬದ ಸದಸ್ಯರು ಚಿತ್ರಹಿಂಸೆ ನೀಡುತ್ತಿದ್ದರೂ, ಬೇರೆ ದಾರಿ ಕಾಣದೆ ಸಹಿಸಿಕೊಂಡು ಒಳಗೇ ನೋವು ನುಂಗುವ ನಮ್ಮ ಹಲವಾರು ಗೆಳತಿಯರು ತಿಳಿದುಕೊಳ್ಳಲೇ ಬೇಕಾದಂತಹ ವಿಷಯ ಇಲ್ಲಿದೆ.

ಮಹಿಳೆಯು ನಾಲ್ಕು ಗೋಡೆಗಳ ಮಧ್ಯೆ ಕುಟುಂಬದ ಸದಸ್ಯರಿಂದ ಅನುಭವಿಸುವ ದೈಹಿಕ ನೋವು, ಹಿಂಸೆ ಮತ್ತು ಮಾನಸಿಕ ಹಿಂಸೆಯು ಒಮ್ಮೊಮ್ಮೆ ಆತ್ಮಹತ್ಯೆಗೂ ಕಾರಣವಾಗ ಬಹುದು. ಹೊಡೆತ, ಬೈಗುಳ, ಬೆದರಿಕೆ, ಮೂದಲಿಕೆ, ಲೈಂಗಿಕ ಕ್ರಿಯೆಗೆ ಇಷ್ಟವಿಲ್ಲದಿದ್ದರೂ ಸಹ ಒತ್ತಾಯಿಸಿ ಹಿಂಸಿಸುವುದು, ಇವೆಲ್ಲವೂ ಕೌಟುಂಬಿಕ ದೌರ್ಜನ್ಯವೆನಿಸಿಕೊಳ್ಳುತ್ತದೆ.




ಈ ರೀತಿಯ ಶೋಷಣೆಗಳು ಮಹಿಳೆಯ ಮೇಲೆ ಶತಮಾನಗಳಿಂದಲೂ ನಡೆಯುತ್ತಿದ್ದರೂ, ಅದಕ್ಕೆ ಧ್ವನಿ ಬಂದದ್ದು ಮಹಿಳಾ ಚಳವಳಿಗಳು ಬಲಗೊಂಡ ನಂತರವೇ ಎಂಬುದು ಗಮನಾರ್ಹ ಸಂಗತಿ. ಕಳೆದ ಹದಿನೈದು ವರ್ಷಗಳಿಂದ ವಿಶ್ವ ಸಂಸ್ಥೆ ಕೌಟುಂಬಿಕ ದೌರ್ಜನ್ಯದ ಬಗ್ಗೆ ಚರ್ಚೆ ನಡೆಸಿ ತನ್ನ ಸದಸ್ಯ ರಾಷ್ಟ್ರಗಳಲ್ಲಿ ಕಾನೂನು ತರಬೇಕೆಂದು ಒತ್ತಡ ಹಾಕಿದುದರ ಫಲವಾಗಿ, ಭಾರತದಲ್ಲಿ ಸೆಪ್ಟೆಂಬರ್ 13, 2005 ರಂದು ಈ "ಕೌಟುಂಬಿಕ ದೌರ್ಜನ್ಯ ವಿರೋಧಿ ಕಾನೂನು" ಜಾರಿಗೆ ಬಂದಿದೆ.

ಕುಟುಂಬದ ಸದಸ್ಯರು ಮಹಿಳೆಯ ದೇಹದ ಮೇಲೆ ಯಾವುದೇ ರೀತಿಯ ಗಾಯ ಮಾಡುವುದು, ಅವಳೊಂದಿಗೆ ಅಸಭ್ಯವಾಗಿ ನಡೆದುಕೊಳ್ಳುವುದು, ಬೈಯುವುದು, ಬೆದರಿಸುವುದು, ಪರಿಹಾಸ್ಯ ಮಾಡುವುದು, ಮಕ್ಕಳಿಲ್ಲವೆಂದು ಕಿರುಕುಳ ನೀಡುವುದು, ಅವಳಿಗೆ ಸೇರಿದ/ಸೇರಬೇಕಾದ ಆಸ್ತಿಯನ್ನು ಅನುಮತಿಯಿಲ್ಲದೆ ಮಾರುವುದು, ಇವುಗಳೆಲ್ಲವೂ ಈ ಕಾನೂನಿನ ಪ್ರಕಾರ ಅಪರಾಧವಾಗುತ್ತದೆ.

ಮೇಲಿನ ರೀತಿಯ ಘಟನೆಗಳು ಕುಟುಂಬದಲ್ಲಿ ನಡೆದಾಗ, ಅಥವಾ ನಡೆಯುವ ಸಾಧ್ಯತೆಗಳು ಕಂಡುಬಂದಾಗ ತಕ್ಷಣವೇ ಹತ್ತಿರದ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹೂಡಬಹುದು, ನೊಂದ ಮಹಿಳೆ ನೇರವಾಗಿ ದಾಖಲಿಸಬಹುದು, ಅಥವಾ ಆಕೆಯ ಪರವಾಗಿ ಯಾರಾದರೂ ದಾಖಲಿಸಬಹುದು.

ಸ್ನೇಹಿತರೇ ಗಮನಿಸಿ, ನಾವು ಅಸಹಾಯಕರಲ್ಲ, ನಮಗೆ ಯಾವುದೇ ತೊಂದರೆ ಯಾಗದಂತೆ ರಕ್ಷಿಸಲು ಕಾನೂನುಗಳಿವೆ. ನಾವು ಇದನ್ನು ತಿಳಿದುಕೊಳ್ಳಬೇಕು. ಬಳಸಿಕೊಳ್ಳಬೇಕು. ❑

*ಸಂವೇದನೆ....* *(5ನೇ ಪುಟ ನೋಡಿ)*

ಭಾರತದ ನೆರೆ ರಾಷ್ಟ್ರವಾದ ಬಾಂಗ್ಲಾ ಹಿಂದಿನಿಂದಲೂ ಸೆಣಬು ಹಾಗೂ ಮಸ್ಲಿನ್ ಬಟ್ಟೆ ತಯಾರಿಕೆಗೆ ಹೆಸರಾದ ದೇಶ. 1974ರ ಎಮ್.ಎಫ್.ಎ (Multi Fibre arrangement) ನಲ್ಲಿ ಈ ದೇಶಕ್ಕೆ ಕೋಟಾ ಪದ್ಧತಿಯಿಂದ ವಿನಾಯತಿ ಸಿಕ್ಕಿದ್ದರಿಂದ ಗಾರ್ಮೆಂಟ್ಸ್ ಉದ್ಯಮವು ಹೇರಳವಾಗಿ ಬೆಳೆದು. ಅತಿ ಹೆಚ್ಚು ಉದ್ಯೋಗಗಳನ್ನು ಸೃಷ್ಟಿಸಿತ್ತು. ಭಾರತದಲ್ಲಿದ್ದಂತೆ ಬಾಂಗ್ಲಾ ದೇಶವೂ ಸಹ ಕನಿಷ್ಠ ವೇತನವನ್ನೊಳಗೊಂಡು ಕಾರ್ಮಿಕ ಕಾನೂನುಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವಲ್ಲಿ ವಿಫಲವಾಗಿವೆ. ಮಾಲೀಕರು ಕಾರ್ಮಿಕರನ್ನು ಹಲವಾರು ರೀತಿಯಲ್ಲಿ ಶೋಷಣೆ ಮಾಡುತ್ತಾ ತಮ್ಮ ಲಾಭವನ್ನು ಹೆಚ್ಚಿಸಿಕೊಳ್ಳುತ್ತಿದ್ದಾರೆ. ಶೋಷಣೆಯನ್ನು ಸಹಿಸಿ ಸಹಿಸಿ ಸಹನೆ ಮೀರಿದ ಕಾರ್ಮಿಕರು ಮೇ 23 ರಂದು ಉಗ್ರ ರಾಗಿ ರಸ್ತೆಗಿಳಿದು ಹಲವಾರು ಗಾರ್ಮೆಂಟ್ಸ್ ಕಾರ್ಖಾನೆಗಳನ್ನು ಹಾನಿಗೊಳಪಡಿಸಿ ಪ್ರತಿಭಟನೆ ನಡೆಸಿ ವಿಶ್ವದ ಗಮನವನ್ನು ತಮ್ಮೆಡೆಗೆ ಸೆಳೆದುಕೊಂಡಿದ್ದಾರೆ. ಘಟನೆಯಲ್ಲಿ ನೂರಾರು ಜನರು ಗಾಯಗೊಂಡಿದ್ದು, ಹಲವಾರು ಕಾರ್ಮಿಕರು ಜೀವ ಕಳೆದುಕೊಂಡಿದ್ದರೂ, ತಾವು ಶೋಷಣೆಯನ್ನು ಇನ್ನು ಸಹಿಸಲು ಸಾಧ್ಯವಿಲ್ಲ, ತಾವೂ ಮನುಷ್ಯರು, ತಮಗೂ ಹಕ್ಕುಗಳಿವೆ, ಎಂಬುದನ್ನು ತೋರಿಸಿದ್ದಾರೆ. ಆಡಳಿತಶಾಹಿಗಳಿಗೆ ಇದೊಂದು ಪಾಠವಾಗಬೇಕಿದೆ. ಸ್ಥಳೀಯ ಪುಂಡರನ್ನು ಸಾಕಿಕೊಂಡು ಕಾರ್ಮಿಕರನ್ನು ಹೆದರಿಸಿ ಕೆಲಸ ಮಾಡಿಸಿಕೊಳ್ಳುವ ಕಾಲ ಇದಲ್ಲ. ಸಹನೆ ಮೀರಿದ ಕಾರ್ಮಿಕರು ಏನು ಬೇಕಾದರೂ ಮಾಡುತ್ತಾರೆ ಎಂಬುದಕ್ಕೆ ಮೇಲಿನ ಘಟನೆ ಉತ್ತಮ ಉದಾಹರಣೆಯಾಗಿದೆ. ಸರ್ಕಾರಗಳು ಎಚ್ಚೆತ್ತು ಕಾರ್ಮಿಕ ಕಾನೂನುಗಳನ್ನು ಜಾರಿಗೆ ತಂದು ಕಾರ್ಮಿಕರಿಗೆ ನ್ಯಾಯ ಒದಗಿಸದಿದ್ದರೆ ಮುಂದೆ ಇಂತಹ ಘಟನೆಗಳು ಮರುಕಳಿಸ ಬಹುದು.

ವಿಶ್ವದಲ್ಲಿ ಚಳವಳಿಗಳು ಸತ್ತಿಲ್ಲ. ಜನರ ಅಭಿಪ್ರಾಯಗಳಿಗೆ ಆಳುವವರು ಮನ್ನಣೆ ಕೊಡಲೇಬೇಕು / ಕೊಡದಿದ್ದರೆ ಬಹು ದೊಡ್ಡ ಬೆಲೆ ತೆರಬೇಕಾಗುತ್ತದೆ, ಎಂಬುದಕ್ಕೆ ನೇಪಾಳದ ಇತ್ತೀಚಿನ ಬೆಳವಣಿಗೆಯೇ ಉತ್ತಮ ಉದಾಹರಣೆಯಾಗಿದೆ.

ಭಾರತದ ಸರಕಾರಕ್ಕೆ ಕಾರ್ಯದರ್ಶಿಗಳ ಸಮಿತಿಯೊಂದು ವರದಿಯೊಂದನ್ನು ನೀಡಿದ್ದು, ಆ ವರದಿಯಲ್ಲಿ ಈಗ ಇರುವ ಹಲವಾರು ಕಾರ್ಮಿಕ ಕಾನೂನುಗಳನ್ನು ಸರಳಗೊಳಿಸಬೇಕೆಂದು ಹಲವಾರು ತಿದ್ದುಪಡಿಗಳನ್ನು ಶಿಫಾರಸು ಮಾಡಿದೆ ಎಂದು ತಿಳಿದು ಬಂದಿದೆ. (ವಾರಕ್ಕೆ 48 ಗಂಟೆಗಳ ಕೆಲಸದ ಅವಧಿ ಯನ್ನು 60 ಗಂಟೆಗಳಿಗೂ, ಕಾರ್ಮಿಕರಿಗೆ 100 ದಿನಗಳವರೆಗೆ ಮಾತ್ರ ಕೆಲಸದ ಖಾತ್ರಿ, ಇತ್ಯಾದಿ) ಇದರಿಂದ ಹೆಚ್ಚು ಹೆಚ್ಚು ಜನರಿಗೆ ಉದ್ಯೋಗ ಸಿಗುತ್ತದೆ ಎಂದು ಸಮಿತಿಯ ಅಭಿಪ್ರಾಯ ವಾಗಿದೆ.

ಕಾರ್ಮಿಕ ದೃಷ್ಟಿಯಿಂದ ಅಧ್ಯಯನಗಳನ್ನು ನಡೆಸದೆ ಬಹುರಾಷ್ಟ್ರೀಯ ಕಂಪನಿಗಳ ಒತ್ತಡಕ್ಕೆ ಮಣಿದು ಏಕಮುಖ ವಾಗಿ ಚಿಂತಿಸಿ ನೀಡಿರುವ ಇಂತಹ ವರದಿಗಳನ್ನು ಸರ್ಕಾರ ಗಮನಿಸಬಾರದು. ❑



Scanned with OKEN Scanner

# ಆ್ಯಸಿಡ್ ದಾಳಿ ಎಂಬ ಮಹಾಮಾರಿ

ಆಸಿಡ್ ದಾಳಿ ಎಂಬ ರಕ್ಕಸನ ಹಿಡಿತಕ್ಕೆ ಸಿಕ್ಕು ನಲುಗಿರುವ ಎಷ್ಟೋ ಮಹಿಳೆಯರ ಬರ್ಬರ ಕತೆಯನ್ನು ನಾವೆಲ್ಲರೂ ಕೇಳಿದ್ದೇವೆ. ಮಾನವನ ಅತ್ಯಂತ ಕ್ರೂರ ಮನಃಸ್ಥಿತಿಗೆ ಇದು ಸಾಕ್ಷಿಯಾಗುತ್ತದೆ. ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕದಲ್ಲಿ ಆಸಿಡ್ ದಾಳಿಗೆ ಒಳಗಾದವರ ಸಂಖ್ಯೆ 56. ಇನ್ನೆಷ್ಟು ಪ್ರಕರಣಗಳು ಬೆಳಕಿಗೆ ಬರದೇ ಹೋಗಿದೆಯೋ ಬಲ್ಲವರಾರು?

ಇದು ಹೀಗೆಯೇ ಮುಂದುವರೆಯಬೇಕೇ? ರಕ್ಷಣೆ ಒದಗಿಸಬೇಕಾದ ಸರ್ಕಾರ ಏನು ಮಾಡುತ್ತಿದೆ? ಆಸಿಡ್ ದಾಳಿಗೆ ಒಳಗಾದವರಿಗೆ ಕನಿಷ್ಟ ಪಕ್ಷ ಪ್ರಥಮ ಚಿಕಿತ್ಸೆ ನೀಡಲು ವ್ಯವಸ್ಥೆ, ಅವರ ಪುನರ್ವಸತಿ ಬಗ್ಗೆ, ಹಾಗೂ ದಾಳಿ ಮಾಡಿದ ಅಪರಾಧಿಗಳಿಗೆ ಶೀಘ್ರ ಶಿಕ್ಷೆ ನೀಡಬೇಕೆಂದು, ಆಸಿಡ್ ದಾಳಿಯ ವಿರುದ್ಧ ಪ್ರಚಾರ ಮತ್ತು ಆಂದೋಲನಗಳನ್ನು (CSAAAW) ನಡೆಸುತ್ತಿರುವ ಬೆಂಗಳೂರಿನ ಹಲವು ಮಹಿಳಾ ಸಂಘಟನೆಗಳ ಒಕ್ಕೂಟವು ಸರ್ಕಾರಕ್ಕೆ ಒತ್ತಡ ಹಾಕುತ್ತಿದೆ. ಈ ಸಂಬಂಧ ದಿನಾಂಕ 28-5-2006 ರಂದು ಮುಖ್ಯಮಂತ್ರಿಯವರ ಗೃಹ ಕಚೇರಿ "ಕೃಷ್ಣಾ" ದ ಎದುರು ಪ್ರತಿಭಟನಾ ಪ್ರದರ್ಶನವನ್ನು ನಡೆಸಲಾಗಿತ್ತು.

ಮೇಲಿನ ಎಲ್ಲಾ ಅಂಶಗಳಿಗೂ ಸರ್ಕಾರ ಶೀಘ್ರವೇ ಸ್ಪಂದಿಸಿ, ಮುಂದೆ ಈ ರೀತಿ ನಡೆಯದಂತೆ ತಡೆಯಲು ಆಸಿಡ್ ಉತ್ಪಾದನೆ, ಹಾಗೂ ಮಾರಾಟದ ಮೇಲೆ ನಿಯಂತ್ರಣ ತರಬೇಕೆಂದು ಮುನ್ನಡೆಯೂ ಸಹ ಆಗ್ರಹಿಸುತ್ತದೆ.

ಮಾಹಿತಿ

## ಕಾರ್ಮಿಕರೇ ಗಮನಿಸಿ....

ರಾಜ್ಯ ಸರ್ಕಾರವು ಕಾರ್ಮಿಕರ ತುಟ್ಟಿಭತ್ಯೆ (DA)ಯನ್ನು ಘೋಷಿಸಿದ್ದು, ಈ ಹೆಚ್ಚಿನ ಭತ್ಯೆಯು 1-4-2006ರಿಂದ ಜಾರಿಗೆ ಬರಬೇಕು. ಏರಿಕೆಯಾಗಿರುವ ಅಂಶಗಳು ಈ ಕೆಳಗಿನಂತಿದೆ.

| | | |
|---|---|---|
| ಹೆಚ್ಚಳವಾದ ಅಂಶಗಳು | : | 119 |
| ಪ್ರತಿ ಅಂಶಕ್ಕೆ | : | 3 ಪೈಸೆ |
| ಒಟ್ಟು ಹೆಚ್ಚಳವಾದ ವೇತನ ತಿಂಗಳಿಗೆ | : | 119 x 3 ಪೈಸೆ x 30 ÷ 100 = 107.10 ಪೈಸೆ |
| ಪ್ರತಿ ದಿನಕ್ಕೆ | : | 107.10 ÷ 26 = ರೂ. 4.11 ಪೈಸೆ |

ಕಾರ್ಮಿಕರ ಮೇ ತಿಂಗಳ ವೇತನದಲ್ಲಿ 107.10 ರೂ.ಗಳಷ್ಟು ವೇತನ ಹೆಚ್ಚಳವಾಗಬೇಕು. ವೇತನ ಹೆಚ್ಚಳವಾಗದಿದ್ದರೆ, ಹಾಗೂ ಹೆಲ್ಪರ್‌ಗಳಿಗೆ ಪ್ರತಿದಿನಕ್ಕೆ 88.75 ರೂ.ಗಳಿಗಿಂತ ಕಡಿಮೆ ವೇತನ ದೊರೆಯುತ್ತಿದ್ದರೆ GATWUವನ್ನು, ಈ ಸಂಖ್ಯೆಯಲ್ಲಿ ಸಂಪರ್ಕಿಸಿ : 9845019056

## ನಿಮ್ಮ ಮಾತು

ಸೂಜಿದಾರದಲ್ಲಿ ಏಪ್ರಿಲ್ ಸಂಚಿಕೆಯ ಮಾಹಿತಿ ಹಕ್ಕು ಕಾಯಿದೆಯ ಬಗೆಗಿನ ವಿವರ ಬಹಳ ಉಪಯುಕ್ತವಾಗಿದೆ

*– ರುಕ್ಮಿಣಿ, ಚಾಮರಾಜಪೇಟೆ*

ಪ್ರತಿವರ್ಷ ನಮಗೆ ಡಿ.ಎ ಎಷ್ಟು ಹೆಚ್ಚಾಗುತ್ತದೆ? ಅದನ್ನು ಹೇಗೆ ಲೆಕ್ಕ ಹಾಕುತ್ತಾರೆ? ನಮಗೆ ಯಾವಾಗ ಸಿಗಬೇಕು ಎಂಬ ಮಾಹಿತಿಗಳು ತಿಳಿದಿರಲಿಲ್ಲ. ಸೂಜಿದಾರ ಅದನ್ನು ತಿಳಿಸಿ ಬಹಳ ಸಹಾಯ ಮಾಡಿದೆ.

*– ಸರೋಜ ಮತ್ತು ಸ್ನೇಹಿತರು, ವಿ.ಎಫ್ ಇಂಡಿಯಾ*

ಅನಧಿಕೃತರ ಬಳಿ ಚೀಟಿ ಹಾಕಿ ಮೋಸಹೋದವರ ಬಗ್ಗೆ ತಿಳಿದು ಬಹಳ ಬೇಸರವಾಯಿತು. ಈ ಘಟನೆಯಿಂದ ನಾವೆಲ್ಲರೂ ಪಾಠ ಕಲಿಯಬೇಕು.

*– ಗೀತ ಮತ್ತು ಸ್ನೇಹಿತರು, ಎಫ್.ಎಫ್.ಐ*

ಸೂಜಿ-ದಾರ ಚೆನ್ನಾಗಿ ಮೂಡಿ ಬರುತ್ತಿದೆ. ಕಾರ್ಮಿಕರ ಕಷ್ಟ ಸುಖಗಳಿಗೆ ಸ್ಪಂದಿಸುತ್ತಿದೆ. ಇದೇ ರೀತಿ ಮುಂದೆಯೂ ಮೂಡಿ ಬರಲೆಂದು ಶುಭ ಕೋರುವೆ.

*– ಸುಜಾತ, ನಮಸ್ತೆ ಎಕ್ಸ್‌ಪೋರ್ಟ್ಸ್*

## ಕಾರ್ಮಿಕರೇ ಎಚ್ಚರ!!

ನೀವು ಕೆಲಸ ಮಾಡುತ್ತಿರುವ ಕಾರ್ಖಾನೆಯ ಹೆಸರು ಇದ್ದಕ್ಕಿದ್ದಂತೇ ಬದಲಾಯಿತೇ? ನಿಮಗೆ ಹೊಸ ಗುರುತಿನ ಚೀಟಿ ಕೊಟ್ಟಿದ್ದಾರೆಯೇ? ಅದರಲ್ಲಿ ನೀವು ಕೆಲಸಕ್ಕೆ ಸೇರಿದ ದಿನಾಂಕ ಬದಲಿಸಿದೆಯೆ? ಅಲಕ್ಷಿಸ ಬೇಡಿ

ಇತ್ತೀಚೆಗೆ ಬೆಂಗಳೂರಿನಲ್ಲಿ ಸ್ಪರ್ಧೆಗಿಳಿದಂತೆ ಹೊಸ ಹೊಸ ಕಾರ್ಖಾನೆಗಳು ತಲೆಯೆತ್ತುತ್ತಿವೆ. ಇದರೊಂದಿಗೆ ಹಳೆಯ ಕಾರ್ಖಾನೆಗಳು ತಮ್ಮ ಹೆಸರನ್ನು ಬದಲಿಸುವ ಪ್ರವೃತ್ತಿಯೂ ವೇಗವಾಗಿ ಹೆಚ್ಚುತ್ತಿದೆ. ಉದಾಹರಣೆಗೆ ಮೈಸೂರು ರಸ್ತೆಯೊಂದರಲ್ಲೇ ಸುಮಾರು ನಾಲ್ಕೈದು ಕಾರ್ಖಾನೆಗಳು ತಮ್ಮ ಹಳೆಯ ಹೆಸರನ್ನು ಬದಲಿಸಿವೆ.

ಕಾರ್ಖಾನೆಯ ಹೆಸರು ಬದಲಿಸಲು ಮಾಲೀಕರು ಕಾರ್ಮಿಕ ಇಲಾಖೆ, ಪಿ.ಎಫ್. ಇಲಾಖೆ ಈ ಎಲ್ಲಾ ಕಡೆಯಲ್ಲೂ ಅನುಮತಿ ತೆಗೆದುಕೊಳ್ಳಬೇಕು. ಕಾರ್ಮಿಕರಿಗೆ ಬರವಣಿಗೆಯ ಮೂಲಕ ತಿಳುವಳಿಕೆ ನೀಡಬೇಕು. ಕೆಲವು ಕಾರ್ಖಾನೆಗಳಲ್ಲಿ ಕಾರ್ಮಿಕರ ಸೇವಾವಧಿಯನ್ನು ಮುಂದುವರೆಸುತ್ತಿದ್ದಾರೆ. ಆದರೆ ಕೆಲವು ಕಾರ್ಖಾನೆಗಳಲ್ಲಿ ಕಾರ್ಮಿಕರನ್ನೂ ಸಹ ನ್ಯೂ ಅಪಾಯಿಂಟ್‌ಮೆಂಟ್ ಮಾಡುತ್ತಿದ್ದಾರೆ. ಇದು ಕಾರ್ಮಿಕರಿಗೆ ಆಗುತ್ತಿರುವ ಬಹಳ ದೊಡ್ಡ ಅನ್ಯಾಯವಾಗಿದೆ.

ಮೈಸೂರು ರಸ್ತೆಯ ಶಾಲಿನಿ ಇಂಟರ್‌ನ್ಯಾಷನಲ್, ವಿದ್ಯಾ ಕ್ರಿಯೇಶನ್ಸ್ ಎಂದು ಬದಲಾಯಿತು, ನಂತರ ಟೆಕ್ಸ್‌ಪೋರ್ಟ್ಸ್ ಕ್ರಿಯೇಶನ್ಸ್ ಎಂದೂ ಹೆಸರು ಬದಲಿಸಿಕೊಂಡಿತು. ಈ ಕಾರಣಕ್ಕಾಗಿ ಮೊದಲಿನಿಂದ ಕೆಲಸ ಮಾಡಿರುವ ಕಾರ್ಮಿಕರು ಈಗ ಪಿ.ಎಫ್.ಗೆ ಮೂರು ಬಾರಿ ಅರ್ಜಿ ಸಲ್ಲಿಸಬೇಕಾಗಿದೆ. ಕಾರ್ಖಾನೆಗೂ, ಪಿ.ಎಫ್ ಕಚೇರಿಗೂ ಅಲೆಯುವ ಪರಿಸ್ಥಿತಿ ಮೂಡಿದೆ.

ಆದ್ದರಿಂದ ಸ್ನೇಹಿತರೇ, ದಯವಿಟ್ಟು ಕಾರ್ಖಾನೆಯ ಹೆಸರು ಬದಲಾದಲ್ಲಿ ಪ್ರಶ್ನಿಸಿ, ವಿವರ ನೀಡುವಂತೆ ಕೇಳಿ. ಅವರು ನೀಡದೆ ನಿರ್ಲಕ್ಷ್ಯ ಮಾಡಿದಲ್ಲಿ, ನೀವು ಸುಮ್ಮನಾಗುವುದು ಸರಿಯಲ್ಲ. ಅಗತ್ಯವಿದ್ದರೆ GATWU – ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ ಅನ್ನು ಸಂಪರ್ಕಿಸಿ. ▫

# ಅರಿವು

# ಫ್ಯಾಕ್ಟರಿಗಳ ಕಾಯ್ದೆ 1948

ಸ್ನೇಹಿತರೇ ಕಳೆದ ಸಂಚಿಕೆಯಲ್ಲಿ 1948 ರ ಫ್ಯಾಕ್ಟರಿ ಕಾಯಿದೆಯು ಕಾರ್ಮಿಕರ ಸುರಕ್ಷತೆ, ಆರೋಗ್ಯದ ಬಗ್ಗೆ ವಿವರಿಸುವ ಬಗ್ಗೆ ತಿಳಿದಿದ್ದೇವೆ. ಈಗ ಕಾರ್ಮಿಕ ಕಲ್ಯಾಣದ ಬಗ್ಗೆ ತಿಳಿದುಕೊಳ್ಳೋಣ.



- ಯಾವುದೇ ಕಾರ್ಖಾನೆಯಲ್ಲಿ 30 ಕ್ಕಿಂತಲೂ ಹೆಚ್ಚು ಮಹಿಳಾ ಕಾರ್ಮಿಕರಿದ್ದಲ್ಲಿ, ಅವರ 6 ವರ್ಷದೊಳಗಿನ ಮಕ್ಕಳನ್ನು ನೋಡಿಕೊಳ್ಳಲು ಸುಸಜ್ಜಿತ ಬಾಲವಾಡಿಯನ್ನು ಮಾಲೀಕರು ಒದಗಿಸಬೇಕು. ಇಲ್ಲಿ ತರಬೇತಿ ಹೊಂದಿದ ಮೇಲ್ವಿಚಾರಕರನ್ನು ನೇಮಿಸಬೇಕು.
- ಕಾರ್ಖಾನೆಯಲ್ಲಿ ಪ್ರಥಮ ಚಿಕಿತ್ಸಾ ವ್ಯವಸ್ಥೆ ಇರಬೇಕು. 500ಕ್ಕಿಂತ ಹೆಚ್ಚು ಮಂದಿ ಕಾರ್ಮಿಕರು ಕೆಲಸ ಮಾಡುವ ಕಾರ್ಖಾನೆಗಳಲ್ಲಿ, ತುರ್ತು ವಾಹನವನ್ನು ಒದಗಿಸಬೇಕು. ವೈದ್ಯರು ಮತ್ತು ನರ್ಸ್‌ಗಳ ಸಹಾಯವು ಯಾವುದೇ ಸಮಯದಲ್ಲಿಯೂ ದೊರಕುವಂತೆ ವ್ಯವಸ್ಥೆ ಮಾಡಬೇಕು.
- 250 ಕ್ಕಿಂತಲೂ ಅಧಿಕ ಕಾರ್ಮಿಕರು ಕೆಲಸ ಮಾಡುತ್ತಿರುವ ಕಾರ್ಖಾನೆಗಳಲ್ಲಿ ಸುಸಜ್ಜಿತವಾದ ಕ್ಯಾಂಟೀನ್‌ನಲ್ಲಿ ಕಾರ್ಮಿಕರಿಗೆ ರಿಯಾಯಿತಿ ದರದಲ್ಲಿ ಆಹಾರ ಒದಗಿಸಬೇಕು.
- 500ಕ್ಕಿಂತ ಹೆಚ್ಚು ಮಂದಿ ಕಾರ್ಮಿಕರು ಕೆಲಸ ಮಾಡುವ ಕಾರ್ಖಾನೆಗಳಲ್ಲಿ ಕಾರ್ಮಿಕರ ಕುಂದು ಕೊರತೆಗಳನ್ನು ಗಮನಿಸಲು ಕಾರ್ಮಿಕ ಕಲ್ಯಾಣ ಅಧಿಕಾರಿಗಳನ್ನು (ವೆಲ್‌ಫೇರ್ ಆಫೀಸರ್) ನೇಮಿಸಬೇಕು.
- ಪ್ರತಿಯೊಬ್ಬ ವಯಸ್ಕ ಕಾರ್ಮಿಕರು ದಿನಕ್ಕೆ 8 ಗಂಟೆಗಳಂತೆ ವಾರಕ್ಕೆ 48 ಗಂಟೆಗಳ ಕಾಲ ಕೆಲಸ ಮಾಡಬೇಕು. ಒಂದು ವಾರದಲ್ಲಿ 48 ಗಂಟೆಗಳಿಗಿಂತಲೂ ಹೆಚ್ಚು ಕೆಲಸ ಮಾಡಿದಲ್ಲಿ ವೇತನದ ಎರಡುಪಟ್ಟು ಹಣವನ್ನು ನೀಡಬೇಕು.
- ಯಾವುದೇ ಕಾರ್ಮಿಕರಿಗೆ ದಿನಕ್ಕೆ ಹತ್ತೂವರೆ ಗಂಟೆಗಳಿಗಿಂತ ಹೆಚ್ಚು ಕೆಲಸ ಮಾಡಿಸುವಂತಿಲ್ಲ.
- ಪ್ರತಿಯೊಬ್ಬ ಕಾರ್ಮಿಕರು ವಾರದಲ್ಲಿ ಒಂದು ದಿನ ರಜೆ ಹೊಂದಬೇಕು. ರಜೆ ಯಾವ ದಿನ ಇರುತ್ತದೆ ಎಂಬುದನ್ನು ನಾಮಫಲಕದಲ್ಲಿ ನಮೂದಿಸಿರಬೇಕು.
- ಒಂದೇ ಬಾರಿಗೆ ಒಬ್ಬ ಕಾರ್ಮಿಕರಿಗೆ ಬೇರೆ ಬೇರೆ ಕಾರ್ಖಾನೆಗಳಲ್ಲಿ ಕೆಲಸ ನೀಡುವಂತಿಲ್ಲ.
- ಪ್ರತಿಯೊಬ್ಬ ಕಾರ್ಮಿಕರ ಕೆಲಸದ ಅವಧಿ ಮತ್ತು ನಿರ್ದಿಷ್ಟ ಪಡಿಸಿದ ಕೆಲಸದ ವಿವರಗಳನ್ನು ಸೂಚನಾ ಫಲಕದಲ್ಲಿ ಹಾಕಬೇಕು.
- ವಿರಾಮವಿಲ್ಲದೆ ಸತತವಾಗಿ ಐದು ಗಂಟೆಗಳಿಗೂ ಹೆಚ್ಚುಕಾಲ ಕೆಲಸ ಮಾಡಿಸುವಂತಿಲ್ಲ.

❑

# ಆರೋಗ್ಯ ಭಾಗ್ಯ

ಸ್ನೇಹಿತರೇ ನಮ್ಮ ದಿನನಿತ್ಯದ ಜೀವನದಲ್ಲಿ ಬಳಸುವ ಕೆಲವು ಆಹಾರ ಪದಾರ್ಥಗಳು ಕೆಲವು ಗಂಭೀರ ಹಾಗೂ ಸಾಮಾನ್ಯ ಕಾಯಿಲೆಗಳನ್ನು ನಿವಾರಿಸಲು ಬಹಳ ಸಹಾಯಮಾಡುತ್ತವೆ. ಅಂತಹ ಕೆಲವು ಮನೆಮದ್ದುಗಳು ನಿಮಗಾಗಿ

ಗಂಧವನ್ನು ಹಾಲಿನೊಂದಿಗೆ ಬೆರೆಸಿ ಮುಖಕ್ಕೆ ಹಚ್ಚಿಕೊಂಡರೆ ಕ್ರಮೇಣ ಮೊಡವೆಗಳು ಮಾಯವಾಗುತ್ತವೆ. ಆರಂಭದಿಂದಲೇ ಹೀಗೆ ಮಾಡುತ್ತಿದ್ದರೆ ಮೊಡವೆಗಳೇ ಬರುವುದಿಲ್ಲ.

* * *

ಪ್ರತಿ ರಾತ್ರಿ ಹಾಲಿಗೆ ಜೇನುತುಪ್ಪ ಬೆರೆಸಿ ಕುಡಿದರೆ ಚೈತನ್ಯ ಮೂಡುತ್ತದೆ. ವೈವಾಹಿಕ ಜೀವನದಲ್ಲಿ ಲವಲವಿಕೆ ಉಂಟಾಗುತ್ತದೆ. ನಿಶ್ಶಕ್ತಿ ಕಡಿಮೆಯಾಗುತ್ತದೆ.

* * *

ಅಲರ್ಜಿಯಿಂದ ಸೀನು ಶುರುವಾದಾಗ ತಕ್ಷಣವೇ ಮಾತ್ರೆ ನುಂಗುವ ಬದಲು ಕಡಿಮೆ ಬೆಣ್ಣೆ ತೆಗೆದ ಮಜ್ಜಿಗೆಗೆ ಸಕ್ಕರೆ ಬೆರೆಸಿ ಕುಡಿದರೆ ಕೆಲವೇ ನಿಮಿಷಗಳಲ್ಲಿ ಸೀನು ನಿಂತುಹೋಗುತ್ತದೆ.

* * *

ಕಲ್ಲಂಗಡಿ ಹಣ್ಣನ್ನು ಪುಡಿಮಾಡಿದ ಜೀರಿಗೆ ಮತ್ತು ಸಕ್ಕರೆಯೊಂದಿಗೆ ಸೇವಿಸಿದರೆ ಅತಿಯಾದ ಬಾಯಾರಿಕೆ ನಿವಾರಣೆಯಾಗುವುದು.

* * *

ಕ್ಯಾರೆಟ್ ಮತ್ತು ನಿಂಬೆಹಣ್ಣಿನ ರಸವನ್ನು ಸಮಪ್ರಮಾಣದಲ್ಲಿ ಬೆರೆಸಿಟ್ಟುಕೊಂಡು ಅದಕ್ಕೆ ಕೊಬ್ಬರಿ ಎಣ್ಣೆ ಸೇರಿಸಿ ಕುಡಿಸಿ. ಇದನ್ನು ಸದಾ ಬಳಸುತ್ತಿದ್ದರೆ ಕೂದಲು ಕಪ್ಪಾಗಿ ಸೊಂಪಾಗಿ ಬೆಳೆಯುತ್ತದೆ.

*(ಸಂಗ್ರಹ)*

# ಕಾಮನಬಿಲ್ಲು

## ಶುಭಾಶಯಗಳು



ನ್ಯಾನ್ಸಿ
ಹುಟ್ಟಿದ ದಿನಾಂಕ: 7-7-1999
ತಾಯಿ : ಉಷಾ
ಕಾರ್ಖಾನೆ : ಅರವಿಂದ್ ಕ್ಲಾತಿಂಗ್



ಲಲಿತಾ ಮತ್ತು ಕಾಳಪ್ಪ
ಮದುವೆಯಾದ ದಿನಾಂಕ: 18-6-89 (17ನೇ ವರ್ಷ)
ಕಾರ್ಖಾನೆ : ಛೇದು ಕ್ಲಾತಿಂಗ್



ಸರೋಜ ಮತ್ತು ಕನ್ನಪ್ಪ
ಮದುವೆಯಾದ ದಿನಾಂಕ: 18-6-92 (14ನೇ ವರ್ಷ)
ಕಾರ್ಖಾನೆ : ವಿ.ಎಫ್. ಇಂಡಿಯಾ

---

**2005 – 2006 ರ ಸಾಲಿನ ಎಸ್.ಎಸ್.ಎಲ್.ಸಿ. ಹಾಗೂ ಪಿ.ಯು.ಸಿ. ಪರೀಕ್ಷೆಯಲ್ಲಿ ಶೇ. 60ಕ್ಕಿಂತ ಹೆಚ್ಚು ಅಂಕ ಗಳಿಸಿದ ಗಾರ್ಮೆಂಟ್ಸ್ ಕಾರ್ಮಿಕರ ಮಕ್ಕಳನ್ನು ಮುನ್ನಡೆ ಹಾರ್ದಿಕವಾಗಿ ಅಭಿನಂದಿಸುತ್ತದೆ**

---



ಪ್ರವೀಣ್
SSLC : 77.6%
ತಾಯಿ : ಲಲಿತಾ
ಕಾರ್ಖಾನೆ :
ಛೇದು ಕ್ಲಾತಿಂಗ್



ಎಸ್. ಮಂಜುನಾಥ್
SSLC : 64.16%
ತಾಯಿ : ಶಾಂತಮ್ಮ
ಕಾರ್ಖಾನೆ :
ಗಾಮ್ಸ್ ಎಕ್ಸ್‌ಪೋರ್ಟ್ಸ್



ಹರ್ಷಲಾ
II PUC : 70%
ತಾಯಿ : ರಾಧಾ
ಕಾರ್ಖಾನೆ :
ಜಾಯ್ಸ್ ಅಪಾರೆಲ್ಸ್



ದಯಾನಂದ್
II PUC : 64.33%
ತಾಯಿ : ಕಮಲಮ್ಮ
ಕಾರ್ಖಾನೆ : FFI,
ಗೊರಗುಂಟೆಪಾಳ್ಯ



ಚೈತ್ರ ಟಿ.ಸಿ
II PUC : 60%
ತಾಯಿ : ಸುಶೀಲಾ
ಕಾರ್ಖಾನೆ :
ವಿ.ಎಫ್ ಇಂಡಿಯಾ



ಪುಷ್ಪಾ ಕೆ.
II PUC : 67%
ತಾಯಿ : ರತ್ನಾ ಕೆ.ಪಿ.
ಕಾರ್ಖಾನೆ : ಟೆಕ್ಸ್‌ಪೋರ್ಟ್ ಕ್ರಿಯೇಶನ್ಸ್

## ನೆರವು

ಗಾರ್ಮೆಂಟ್ಸ್ ಕಾರ್ಮಿಕರು ಯಾವುದೇ ಕಾರ್ಮಿಕ ವಿವಾದಕ್ಕಾಗಿ ಈ ಕೆಳಕಂಡ ಕಾರ್ಮಿಕ ಸಂಘಟನೆಯನ್ನು ಈ ವಿಳಾಸದಲ್ಲಿ ಸಂಪರ್ಕಿಸಬಹುದು

ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್
ವರ್ಕರ್ಸ್ ಯೂನಿಯನ್ (GATWU)
ನಂ.8/3, ಶ್ರೀಮಾತಾ ನಿಲಯ
ನ್ಯೂಟಿಂಬರ್‌ಯಾರ್ಡ್ ಲೇಔಟ್
ಮೈಸೂರು ರಸ್ತೆ, ಬೆಂಗಳೂರು-29
ದೂ.: 26751320
ಮೊಬೈಲ್ : 98450 19056

ಮತ್ತು

ಕಾರ್ಮಿಕರು ಕೌಟುಂಬಿಕ ಹಾಗೂ ಸಾಮಾಜಿಕ ಸಮಸ್ಯೆಗಳಿಗೆ ಸಹಾಯ ಬೇಕಿದ್ದಲ್ಲಿ 'ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ'ಯನ್ನು ಈ ಸಂಖ್ಯೆಯಲ್ಲಿ ಸಂಪರ್ಕಿಸಿ
94495 06451

---

ಮಹಿಳಾ ಕಾರ್ಮಿಕರಿಗೆ ಸಹಾಯ ಮಾಡುವ ಇನ್ನಿತರ ಸಂಸ್ಥೆಗಳು

1. **ಕರ್ನಾಟಕ ಮಹಿಳಾ ಆಯೋಗ**
   ನಂ. 105, ಮೊದಲನೇ ಮಹಡಿ
   ಕರ್ನಾಟಕ ಗೃಹ ಮಂಡಳಿ ಕಟ್ಟಡ
   ಕಾವೇರಿಭವನ, ಕೆ.ಜಿ.ರಸ್ತೆ ಬೆಂಗಳೂರು-560009
   ದೂ.: 22216485
2. **ವನಿತಾ ಸಹಾಯವಾಣಿ**
   ಪೊಲೀಸ್ ಕಮಿಷನರ್, ಕಛೇರಿ ಆವರಣ
   ಇನ್‌ಫೆಂಟರಿ ರಸ್ತೆ, ಬೆಂಗಳೂರು
   ಉಚಿತ ದೂರವಾಣಿ: 1091
   ದೂ.: 22943225
3. **ವಿಮೋಚನಾ**
   ನಂ. 33/1-9, ತ್ಯಾಗರಾಜ ಬಡಾವಣೆ
   ಜೈಭಾರತನಗರ, ಮಾರುತಿ ಸೇವಾನಗರ
   ಬೆಂಗಳೂರು-38
   ದೂ.: 25492781 / 25492782
4. **ಪರ್ಯಾಯ ಕಾನೂನು ವೇದಿಕೆ (ALF)**
   ನಂ.4, 3ನೇ ಅಡ್ಡರಸ್ತೆ, 8ನೇ ಮುಖ್ಯರಸ್ತೆ,
   ವಸಂತನಗರ, ಬೆಂಗಳೂರು-560052
   ದೂ.: 22356845
5. **ಕರ್ನಾಟಕ ಕಾನೂನು**
   ಸೇವೆಗಳ ಪ್ರಾಧಿಕಾರ, ಅರಮನೆ ರಸ್ತೆ ಬೆಂಗಳೂರು
   ದೂ.: 22268073 / 22203068

ಸಂಪಾದಕ ಮಂಡಳಿ : ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ, ನಂ. 8/3, ಶ್ರೀಮಾತಾ ನಿಲಯ, ಎನ್.ಟಿ.ವೈ. ಲೇಔಟ್, ಮೈಸೂರು ರಸ್ತೆ, ಬೆಂ-560026. ದೂ : 2675 1320
ಪ್ರಕಾಶಕರು : ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ. ಮುದ್ರಣ : ಇಳಾ ಮುದ್ರಣ, ಬೆಂಗಳೂರು - 560 026. ದೂ. : 30615773 / 26757159